೧	೨	೩	೪
೩೧.	ಕರಿಮುದ್ದನಹಳ್ಳಿ ಮೀನುಮರಿ ಉತ್ಪಾದನಾ ಕೇಂದ್ರ	ಮೈಸೂರು	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಮೈಸೂರು
೩೨.	ಗಾಜನೂರು ಮೀನುಮರಿ ಉತ್ಪಾದನಾ ಕೇಂದ್ರ	ಶಿವಮೊಗ್ಗ	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಶಿವಮೊಗ್ಗ.
೩೩.	ಬೋರನಕಣಿವೆ ಮೀನುಮರಿ ಉತ್ಪಾದನಾ ಕೇಂದ್ರ	ತುಮಕೂರು	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ತುಮಕೂರು.
೩೪.	ಕಣ್ವ ಮೀನುಮರಿ ಉತ್ಪಾದನಾ ಕೇಂದ್ರ	ಬೆಂಗಳೂರು	ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆ, ಬೆಂಗಳೂರು.

ಆ) ಸತತವಾಗಿ ೪ ವರ್ಷಗಳು ರಾಜ್ಯದಲ್ಲಿ ಬರಗಾಲ ಪರಿಸ್ಥಿತಿ ಇದ್ದುದರಿಂದ ಮತ್ತು ಮೀನು ಮರಿಗಳನ್ನು ಸಾಕುವ ಕೊಳಗಳಲ್ಲಿ ನೀರು ನಿಲ್ಲದೇ ಇರುವುದರಿಂದ ಮೀನುಮರಿಗಳ ಉತ್ಪಾದನೆಯನ್ನು ಕಾರ್ಯಕ್ರಮದ ಪ್ರಕಾರ ಸಾಧಿಸಲು ಸಾಧ್ಯವಾಗಲಿಲ್ಲ. ಅಲ್ಲದೆ ಮೀನುಮರಿ ಉತ್ಪಾದನಾ ಕೇಂದ್ರಗಳಲ್ಲಿನ ಕೆಲವು ಕೊಳಗಳು ದುರಸ್ತಿಯಾಗಬೇಕಾಗಿದೆ.

ಇ) ಹಿಡಕಲ್ ಜಲಾಶಯದಲ್ಲಿರುವ ಮೀನುಮರಿ ಉತ್ಪಾದನಾ ಕೇಂದ್ರಕ್ಕೆ ಒದಗಿಸಿರುವ ಸಿಬ್ಬಂದಿ ವರ್ಗ ಈ ಕೆಳಕಂಡಂತಿದೆ:

೧)	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-೧)	-೧.
೨)	ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-೨)	-೧.
೩)	ಮೀನುಗಾರಿಕೆ ಮೇಲ್ವಿಚಾರಕರು	-೧.
೪)	ಮೀನುಗಾರಿಕೆ ಕ್ಷೇತ್ರಪಾಲಕರು	-೮.
೫)	ಜವಾನ	-೧.

ಹಿಡ್‌ಕಲ್ ಜಲಾಶಯದಲ್ಲಿ ಕಳೆದ ೫ ವರ್ಷಗಳಲ್ಲಿ ಉತ್ಪಾದಿಸಿದ ಹಾಗೂ ವಿತರಣೆ ಮಾಡಲಾದ ಮೀನುಮರಿಗಳ ವಿವರ ಈ ಕೆಳಗಿನಂತಿವೆ:

ವರ್ಷ	ಉತ್ಪತ್ತಿ ಮಾಡಿದ ಮೀನು ಮರಿಗಳು (ಲಕ್ಷಗಳಲ್ಲಿ)	ಮೀನುಮರಿಗಳ ವಿತರಣೆ (ಲಕ್ಷಗಳಲ್ಲಿ)
೧೯೮೩-೮೪	೨೧.೦೦	೧೦.೮೩
೧೯೮೪-೮೫	೨೩.೦೦	೧೩.೨೮
೧೯೮೫-೮೬	೧೦.೬೦	೯.೩೦
೧೯೮೬-೮೭	೩೫.೨೫	೮.೯೯
೧೯೮೭-೮೮	೩೨.೫೦	೮.೪೦ (೫.೦೦ ಲಕ್ಷ ದಾಸ್ತಾನು ಇದೆ)
	೧೨೨.೩೫	೫೦.೮೦

ಈ) ಇಲ್ಲ.

ಬಂಟವಾಳ ನೆರೆ ವಿಮೋಚನಾ ನೆರೆ ನಿರ್ಮಾಣದ ಬಗ್ಗೆ

೧೪೧೯ (೨೫೨೫) ಶ್ರೀ ರಮಾನಾಥ ರೈ (ಬಂಟವಾಳ).—ಮಾನ್ಯ ನಗರಾಭಿವೃದ್ಧಿ ಹಾಗೂ ಶೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಬಂಟವಾಳ ನೆರೆ ವಿಮೋಚನಾ ರಸ್ತೆ ನಿರ್ಮಾಣಕ್ಕೆ ಶಿಲಾನ್ಯಾಸ ಮಾಡಿರುವುದು ಸರ್ಕಾರದವರ ಗಮನದಲ್ಲಿದೆಯೇ?

ಅ) ಹಾಗಿದ್ದಲ್ಲಿ, ಸದರಿ ಕಾಮಗಾರಿಯು ಯಾವ ಹಂತದಲ್ಲಿದೆ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಸಚಿವರು).—

ಅ) ಹೌದು.

ಆ) ಸದರಿ ರಸ್ತೆಗೆ ೧೨.೬೧ ಲಕ್ಷ ರೂ. ಗಳ ಅಂದಾಜಿಗೆ ೮೧ರಲ್ಲಿ ಅನುಮೋದನೆ ನೀಡಲಾಗಿತ್ತು. ಆದರೆ ಭೂ ಮಾಲೀಕರು ಇದಕ್ಕೆ ಬೇಕಾದ ಜಮೀನು ಬಿಟ್ಟುಕೊಂಡಿದ್ದುದರಿಂದ. ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಲಿಲ್ಲ. ಆದ್ದರಿಂದ ಈ ನೆರೆ ವಿಮೋಚನಾ ರಸ್ತೆಯನ್ನು ಬದಲೀ ದಾರಿಯಲ್ಲಿ ರಚಿಸಲು ಸಲ್ಲಿಸಿದ ಭೂಸ್ವಾಧೀನ ಪ್ರಸ್ತಾವನೆ ಳ(೧) ಪ್ರಕಟಣೆಯು ಮುಗಿದಿದ್ದು, ವಿಚಾರಣೆ ಮುಗಿಯುವ ಹಂತದಲ್ಲಿದೆ ಎಂದು ತಿಳಿದು ಬಂದಿದೆ. ಈ ರಸ್ತೆ ಈಗ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ.

ಜೋಗ್ ಅಧಿಸೂಚಿತ ಪ್ರದೇಶ ಸಮಿತಿಯನ್ನು ಮಂಡಲ ಪಂಚಾಯಿತಿಯನ್ನಾಗಿ ಪರಿವರ್ತಿಸುವ ಬಗ್ಗೆ

೧೪೨೦(೨೬೮೦) ಶ್ರೀ ಬಿ. ಧರ್ಮಪ್ಪ(ಸಾಗರ).—ಮಾನ್ಯ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಜೋಗ ಅಧಿಸೂಚಿತ ಪ್ರದೇಶ ಸಮಿತಿಯು ಆರ್ಥಿಕ ಬಿಕ್ಕಟ್ಟಿನಿಂದ ಸಾರ್ವಜನಿಕರ ಪ್ರಾಥಮಿಕ ಅಗತ್ಯಗಳಾದ ಕುಡಿಯುವ ನೀರು ರಸ್ತೆ ಕಾಲಾ ಕಟ್ಟಡ ವಿದ್ಯುಚ್ಛಕ್ತಿ ಮುಂತಾದವುಗಳನ್ನು ಒದಗಿಸಲಾಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಅಧಿಸೂಚಿತ ಪ್ರದೇಶ ಸಮಿತಿಯ ಪೌರ ಕಾರ್ಮಿಕರಿಗೆ ಸಂಬಳ ಕೊಡಲು ಸಾಧ್ಯವಿಲ್ಲದಿರುವಾಗ ಈ ಸಮಿತಿಯನ್ನು ಮಂಡಲ ಪಂಚಾಯಿತಿಗಳನ್ನಾಗಿ ಪರಿವರ್ತಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಪರಿಹಾರ ಕಾರ್ಯಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿರುತ್ತೆ.

ಆ) ಈ ಬಗ್ಗೆ ಮನವಿಯು ಸರ್ಕಾರಕ್ಕೆ ಬಂದರೆ ಪರಿಶೀಲಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ದಂಡಾವತಿ ನದಿಗೆ ಅಣೆಕಟ್ಟು ನಿರ್ಮಿಸುವ ವಿಚಾರ

೧೪೨೧ (೨೬೨೨) ಶ್ರೀ ಬಿ. ಧರ್ಮಪ್ಪ (ಸಾಗರ).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸೊರಬ ತಾಲ್ಲೂಕಿನ ದಂಡಾವತಿ ನದಿಗೆ ಅಣೆಕಟ್ಟು ಕಟ್ಟಿಸಲು ಬಹು ಕಾಲದಿಂದ ಅಲ್ಲಿನ ಜನತೆ ಬೇಡಿಕೆ ಸಲ್ಲಿಸಿರುವುದು ಮತ್ತು ಈ ಬಗ್ಗೆ ಸರ್ಕಾರವು ಅನೇಕ ಸಾರಿ ಭರವಸೆ ಕೊಟ್ಟಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಇ) ಹಾಗಿಲ್ಲದಿದ್ದಲ್ಲಿ, ಕಾರಣಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ೧೭,೫೦೦ ಎಕರೆ ಜಮೀನಿಗೆ ನೀರಾವರಿ ಒದಗಿಸುವ ೨೯೩೨ ಲಕ್ಷ ರೂ. ಗಳ ದಂಡಾವತಿ ಜಲಾಶಯ ಯೋಜನೆಯ ಪ್ರಾರಂಭಿಕ ಅನ್ವೇಷಣಾ ವರದಿಯನ್ನು ತಯಾರಿಸಲಾಗಿದೆ.

ಆ) ತಾಂತ್ರಿಕ ಸಮಿತಿಯು ನೀಡಿದ ಶಿಫಾರಸುಗಳಿಗೆ ಅನುಗುಣವಾಗಿ ವರದಿಯನ್ನು ಪರಿಷ್ಕರಿಸಲು ಮುಂದಿನ ಅನ್ವೇಷಣಾ ಕಾರ್ಯ ನಡೆಯುತ್ತಿದೆ.

ಇ) ಉದ್ಭವಿಸುವುದಿಲ್ಲ.